# ಪುಸ್ತಕ ಪರಿಚಯ

**GOSPEL OF THE LIFE SUBLIME : VOL. I**
**ಕನ್ನಡಮೂಲ : ಬದುಕಲು ಕಲಿಯಿರಿ**
**ಲೇಖಕರು: ಸ್ವಾಮಿ ಜಗದಾತ್ಮಾನಂದ**
**ಇಂಗ್ಲಿಷ್ ಅನುವಾದ: ಡಾ.ಎನ್. ತಿರುಮಲೇಶ್ವರ ಭಟ್**
**ಪುಟಗಳು : ೨೫೬ ಪ್ರಕಾಶಕರು : ಅಧ್ಯಕ್ಷರು, ರಾಮಕೃಷ್ಣ ಮಿಷನ್, ೧೭೯, ಬಾರ್ಟ್ಲೆ ರಸ್ತೆ, ಸಿಂಗಾಪುರ 539785**
**ಮೊದಲ ಮುದ್ರಣ: ನವೆಂಬರ್, ೧೯೯೮**

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಪ್ರಕಟಿಸಿರುವ ಸ್ವಾಮಿ ಜಗದಾತ್ಮಾನಂದಜಿಯವರ 'ಬದುಕಲು ಕಲಿಯಿರಿ' ಪುಸ್ತಕದ ಎರಡು ಸಂಪುಟಗಳು ಈಗಾಗಲೇ ಸಾಕಷ್ಟು ಹೆಸರು ಮಾಡಿವೆ. ಜನಮನದ ಮೇಲೆ ಈ ಪುಸ್ತಕ ಬೀರಿರುವ ಪರಿಣಾಮ ಒಂದು ಕಡೆಯಾದರೆ, ೧೯೮೮ರಲ್ಲಿ ಮೊದಲ ಮುದ್ರಣವಾದಂದಿನಿಂದ ಇಲ್ಲಿಯವರೆಗೆ ಇದರ ಎರಡೂ ಭಾಗಗಳು ಸೇರಿದಂತೆ ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿ ಸೃಷ್ಟಿಸಿರುವ ದಾಖಲೆ ಇನ್ನೊಂದು ಕಡೆ. ಇದೇ, ಬಹುಶಃ, ಈ ಪುಸ್ತಕದ ಉಪಯುಕ್ತತೆಯ ಕನ್ನಡಿಯೂ ಆಗಿದೆಯೆನ್ನಬಹುದು. ಈ ಪುಸ್ತಕದ ಮೊದಲ ಭಾಗ ಈಗ ಇಂಗ್ಲಿಷಿನಲ್ಲಿ ಹೊರಬಂದಿದೆ, 'Gospel of the Life Sublime' ಎಂಬ ಹೆಸರಿನಲ್ಲಿ.

ಈ ಪುಸ್ತಕದ ಕೇಂದ್ರಬಿಂದುವೆಂದರೆ, ಮನುಷ್ಯನಲ್ಲಿ ಹುದುಗಿರುವ ಅಪಾರ ಶಕ್ತಿಯಮೇಲೆ ನೀಡಿರುವ ಒತ್ತು. ಇಂತಹ ಅಪಾರ ಸಾಮರ್ಥ್ಯವನ್ನು ಇರಿಸಿಕೊಂಡೂ, ಕೌಟುಂಬಿಕವೋ, ಆರ್ಥಿಕವೋ, ಸಾಮಾಜಿಕವೋ ಆದ ಕಾರಣಗಳಿಂದಾಗಿ ಸಾಧನೆಯಲ್ಲಿ ವಿಫಲನಾಗುವ, ಕೆಲಸಕ್ಕೆ ಬಾರದವನೆಂಬ ಹಣೆಪಟ್ಟಿಯನ್ನು ಅಂಟಿಸಿಕೊಳ್ಳುವ ವ್ಯಕ್ತಿಗಳ ತೊಳಲಾಟ ಲೇಖಕರ ಮನವನ್ನು ಬಹುವಾಗಿ ತಾಕಿದೆ. ಅದರ ಫಲವೇ ಈ ಕೃತಿಯ ನಿರ್ಮಾಣ. ಲೇಖಕರ ಮಾತಿನಲ್ಲೇ ಹೇಳುವುದಾದರೆ, 'ಕಟುಟೀಕೆ, ವಿಮರ್ಶೆ, ನಿಂದೆಗಳಿಗಿಂತಲೂ ಯುವಕರಿಗೆ ತಮ್ಮನ್ನು ತಿದ್ದಿಕೊಳ್ಳಲು ಬೇಕಾಗಿರುವುದು ಯಥಾರ್ಥ ಆದರ್ಶಗಳು, ಮಾದರಿಗಳು ಮತ್ತು ಯೋಗ್ಯ ಮಾರ್ಗದರ್ಶನ. "ಬದುಕಲು ಕಲಿಯಿರಿ"ಯಲ್ಲಿ ಯುವಕರ ಈ ಸಮಸ್ಯೆಗಳಿಗೆ ಉತ್ತರ ನೀಡಲು ಯತ್ನಿಸಲಾಗಿದೆ ಎಂಬುದನ್ನು ಕಾಣಬಹುದು.' (ಮೊದಲ ಭಾಗದ ಮುನ್ನುಡಿ, ಪು. iv, 1994)

ನಾನಾ ಕ್ಷೇತ್ರಗಳಲ್ಲಿ ಸಾಮಾನ್ಯತೆಯಿಂದ ಅಸಾಮಾನ್ಯತೆಗೇರಿದವರ ನಿದರ್ಶನಗಳು ಈ ಪುಸ್ತಕದಲ್ಲಿ ಹೇರಳವಾಗಿವೆ. ಆದರೆ ಈ 'ಅಸಾಮಾನ್ಯತೆ'ಯ ಆದರ್ಶವನ್ನು ಅಸ್ಪಷ್ಟವೂ ಅಮೂರ್ತವೂ ಆಗಿ ಮಾಡದೆ, ದೈನಂದಿನ ಬದುಕಿನ ವಿವರಗಳಲ್ಲಿ ಅದರ ಸಾಧನೆಯನ್ನು ವಾಸ್ತವಗೊಳಿಸಿರುವುದು ಈ ಪುಸ್ತಕದ ವೈಶಿಷ್ಟ್ಯವಾಗಿದೆ. ಅಲ್ಲದೆ ಈ ಯಾವ ಸಾಧನೆ-ಸಿದ್ಧಿಗಳೂ ಕೇವಲ ಲೌಕಿಕದಲ್ಲೇ ಸಂತೃಪ್ತವಾಗಲು ಬಿಡದೆ, ಅದನ್ನು ಅದರಾಚೆಗಿನ ಆಧ್ಯಾತ್ಮಿಕ ಸಾಧನೆಗೆ ಪೂರಕವಾಗುವಂತೆ ಮಾಡುವುದರ ಮೂಲಕ ಈ ಪುಸ್ತಕ ಹೆಚ್ಚು ಸಾರ್ಥಕವಾಗುತ್ತದೆ. ವ್ಯಕ್ತಿನಿರ್ಮಾಣದಿಂದ ರಾಷ್ಟ್ರನಿರ್ಮಾಣದವರೆಗೆ, ವಿಜ್ಞಾನದಿಂದ ಅಧ್ಯಾತ್ಮದವರೆಗೆ ಈ ಕೃತಿಯ ಹರಹು ಇರುವುದರಿಂದ ಇಲ್ಲಿ ಯಾವುದೂ ತ್ಯಾಜ್ಯವೆನಿಸುವುದಿಲ್ಲ. ಆದ್ದರಿಂದಲೇ ಇಲ್ಲಿ ಉದಾಹೃತಗೊಂಡ ಪ್ರತಿಯೊಬ್ಬ ವ್ಯಕ್ತಿ ಅಥವಾ ಪ್ರತಿಯೊಂದು ಉಕ್ತಿ ಸಾರ್ಥಕ ಬದುಕಿನ ವಿಶಾಲ ಪರಿವಲಯದಲ್ಲಿ ತಮ್ಮ ತಮ್ಮ ಔಚಿತ್ಯವನ್ನು ಕಂಡುಕೊಳ್ಳುವಂತಾಗಿದೆ.

ಮೂಲದ ಕನ್ನಡ ನಿರೂಪಣೆಯ ಮೊನಚನ್ನೂ ಓಟವನ್ನೂ ಇಂಗ್ಲಿಷಿನಲ್ಲಿ ಹಿಡಿದಿಡಲು ಅನುವಾದಕರು ಸಾಕಷ್ಟು ಶ್ರಮಿಸಿದ್ದಾರೆ. ಕೃತಿ ಉತ್ತಮವಾದ ಕಾಗದ, ಅಂದವಾದ ಮುದ್ರಣ, ಆಕರ್ಷಕ ರಕ್ಷಾಕವಚದಿಂದ ಕೂಡಿದ್ದು ಬೆಲೆಯೂ ಕೈಗೆಟಕುವಂತಿದೆ. ಕನ್ನಡ ಬಾರದ, ಇಂಗ್ಲಿಷ್ ಬಲ್ಲ ಓದುಗರ ಕೈಗೆ ಈ ಪುಸ್ತಕ ತಲುಪುವಂತೆ ಮಾಡುವುದು ಪುಣ್ಯದ ಕೆಲಸ.

—ಎಚ್. ಎಸ್. ಮುರಳೀಧರ

**ಏಳಿ ಎದ್ದೇಳಿ**
**(ಸಮಗ್ರ ಸ್ವತಂತ್ರ ಕವಿತಾ ಸಂಕಲನ)**
**ಲೇಖಕರು: ರಂ.ರಾ. ನಿಡಗುಂದಿ ("ರಂಗರಾಮ")**
**ಪುಟಗಳು: ೧೬೫, ಬೆಲೆ: ೨೦/-**
**ಪ್ರಕಾಶಕರು: ಜೇಷ್ಠಾ ಪ್ರಕಾಶನ, ಜೋಶಿಗಲ್ಲಿ, ಕುಕನೂರು -೫೮೩ ೨೩೨ (ಜೀ. ರಾಯಚೂರು)**

೫೬ ಸ್ವತಂತ್ರ ಕವನಗಳಿರುವ, ರಂ.ರಾ ನಿಡಗುಂದಿ ("ರಂಗರಾಮ") ಅವರ 'ಏಳಿ ಎದ್ದೇಳಿ'ಕವನ ಸಂಕಲನ ವಿಷಯ ವೈವಿಧ್ಯತೆಗಳ ಮಧುರ ರಸಾಯನವಾಗಿದೆ.

ಶ್ರೀರಾಮಕೃಷ್ಣ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರ ಜೀವನ ಮತ್ತು ಕಾರ್ಯಸಾಧನೆಗಳಿಂದ ಪ್ರಭಾವಿತರಾಗಿರುವ ಶ್ರೀ ನಿಡಗುಂದಿಯವರು 'ಏಳಿ, ಎದ್ದೇಳಿ, ಗುರಿ ತಲುಪುವವರೆಗೂ ನಿಲ್ಲದಿರಿ' ಎಂದು ಸ್ವಾಮಿ ವಿವೇಕಾನಂದರು ಭಾರತೀಯರಿಗೆ ನೀಡಿದ ಕರೆಯನ್ನು ಮೆಚ್ಚಿದವರು. ಅಂತೆಯೇ ಶ್ರೀ ನಿಡಗುಂದಿಯವರು ತಮ್ಮ ಕವನ ಸಂಕಲನಕ್ಕೆ 'ಏಳಿ, ಎದ್ದೇಳಿ' ಎಂಬ ಶಿರೋನಾಮ ನೀಡಿದ್ದಾರೆ.

ಚೀನಾ ಯುದ್ಧದಲ್ಲಿ ಸೋತು, ನಿರ್ವೀರ್ಯರಾದ ಭಾರತೀಯರನ್ನು ವೀರ್ಯವಂತರನ್ನಾಗಿಸುವ ನೀಳ್ಗವಿತೆ 'ಏಳಿ ಎದ್ದೇಳಿ' ಇದರಲ್ಲಿ ಇದೆ. 'ತಾತ ಬಾರೈ' ಎಂದು ಗಾಂಧೀಜಿಯವರನ್ನು ಕುರಿತು 'ತಾತ ಬಾರೈ ಶೀಘ್ರ ಬಾರೈ, ಜಾತ ಸುತರಿಗೆ ಮಾರ್ಗತೋರೈ' ಎಂದು ಹೇಳುವ ಮಾತಂತೂ ಇಂದಿನ ದೇಶದ ಸ್ಥಿತಿಯಲ್ಲಿ ಗಾಂಧೀಜಿಯವರು ತೋರಿದ ಮಾರ್ಗದಲ್ಲಿ ನಡೆವುದು ಅದೆಷ್ಟು ಅವಶ್ಯವಾಗಿದೆ ಎಂದು ಹೇಳುತ್ತದೆ.

'ಏಳಿ ಎದ್ದೇಳಿ' ಕವನ ಸಂಕಲನ ಓದಿದಾಗ ನಿಡಗುಂದಿಯವರ ಕವನರಚನಾ ಕೌಶಲ, ಸೃಜನಶೀಲ ಪ್ರತಿಭೆಯ ಪರಿಚಯವಾಗುತ್ತದೆ. ವಿಷಯ ವೈವಿಧ್ಯತೆಯಿಂದ ಕೂಡಿ, ಸರಳ ಸುಂದರವಾಗಿರುವ ಈ ಕವನ ಸಂಕಲನ ಓದುಗರ ಮನಸೂರೆಗೊಳ್ಳುವುದರಲ್ಲಿ ಸಂಶಯವಿಲ್ಲ.

—ಎಂ.ಎಸ್. ಜೋಷಿ, ಕನ್ನಡ ಉಪಾಧ್ಯಾಯರು,
ಶ್ರೀರಾಮಕೃಷ್ಣ ವಿದ್ಯಾಶಾಲೆ, ಮೈಸೂರು.